DOC-284
T-P-2

R No KRNN 12 29-4-74

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ಸಂವೇಷಿಸಿದ ಪತ್ರಿಕೆ

First Golden Jubilee Celebrated Paper in The State

** Now in 57 th Year **

'Satyavadi daily, Mysore 4

ಸ್ಥಾಪಕರು: ಅರಮನೆ ಹಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ವಿಮರ್ಶಕ ಚಾರವಿಂತ ಎಂ. ಎಸ್. ಕೃಷ್ಣರಾವ್ 3 ಪೈಸೆ

ಹೊಸ ಆಹಾರ ವಲಯ ಮಾಡಲು ಸಚಿವರ ಸೂಚನೆ

ಗೋಧಿ ವ್ಯಾಪಾರ

ನವದೆಹಲಿ— ಸರಕಾರಕ್ಕೆ ಶೇಕಡ 50 ಲೆವಿ ಕೊಡದೆ ಗೋಧಿಯನ್ನು ಬಹಿರಂಗದಲ್ಲಿ ವ್ಯಾಪಾರ ಮಾಡಲು ಅವಕಾಶ ಕೊಡುವದಿಲ್ಲವೆಂದು ಈ ಸಂಬಂದ ಸಂಘ ತನ್ನ ಸದಸ್ಯರಿಗೆ ತಿಳಿಸಿದೆ

★

ಹಣ ದುರುಪಯೋಗ

ಬೆಂಗಳೂರು— ರಾಜ್ಯದ ಖಾದಿ ಮತ್ತು ಗ್ರಾಮ ಕೈಗಾರಿಕಾ ಮಂಡಲಿಯಲ್ಲಿ ದುರುಪಯೋಗವಾಗಿರುವದು ರೂ. 6.13 ಲಕ್ಷವೆಂದೂ, ತನಿಖೆಗೆ ವಿಶೇಷಾಧಿಕಾರಿಗಳನ್ನು ನೇಮಿಸಲಾಗಿದೆಯೆಂದೂ ಶಾಸನ ಸಭೆಯಲ್ಲಿ ತಿಳಿಸಲಾಯಿತು.

★

ಪ್ರತಿಬಂಧಕ ಪಡಿಲಿಸಲಾಗಿದೆ

ಕೊಲಂಬೊ— ಈ ನಗರದಲ್ಲಿ ಮಾತ್ಸ ವಿರೋಧ ಸಂಯುಕ್ತ ನ್ಯಾಷನಲ್ ಪಾರ್ಟಿಯು ಮೇ ಡೇ ಮೆರವಣಿಗೆ ನಡೆಸಲು ಅವಕಾಶವನ್ನು ಶ್ರೀ ಲಂಕಾ ಸರಕಾರ ಅವಕಾಶ ಕೊಟ್ಟಿದೆ – ತಾ|| 20 ರಂದು ವಿಧಿಸಿದ ಪ್ರತಿಬಂಧಕಾಜ್ಞೆಯು ಇತರ ಸಭೆ ಮೆರವಣಿಗೆ ಮೇಲೆ ಇದ್ದೇ ಇದೆ.

★

ಐ ಎ ಎಸ್ ಅಧಿಕಾರಿಯ ಸಸ್ಪೆಂಡ್

ಪಾಟ್ನಾ— ಒಂದು ಸಂಸ್ಥೆಯ ವಿಚಾರದಲ್ಲಿ ಅಕ್ರಮವಾಗಿ ವರ್ತಿಸಿದ ಸಹಕಾರ ಇಲಾಖೆ ಕಾರ್ಯದರ್ಶಿ ಶ್ರೀ ಆರ್. ಆರ್. ಪ್ರಸಾದ್, ಐ ಎ ಎಸ್ ರನ್ನು ಮುಖ್ಯ ಮಂತ್ರಿಯವರು ಸಸ್ಪೆಂಡು ಮಾಡಿದ್ದಾರೆ.

★

ಪರೀಕ್ಷೆ ಬಹಿಷ್ಕಾರ

ಇಂಡೂರು— ಪರೀಕ್ಷೆಯ ತೀವ್ರ ಕಠಿಣವಾಗಿದೆಯೆಂದು 300 ಬಿ. ಕಾಂ. ವಿದ್ಯಾರ್ಥಿಗಳು ಪರೀಕ್ಷಾ ಸ್ಥಳದಿಂದ ಹೊರಬಂದಿದ್ದಾರೆ

ಇತರರೂ ಮುಷ್ಕರಿಸ್ತುವರೇ ?

ಬೊಂಬಾಯಿ— ರೈಲಿನವರು ತಾ || 8 ರಿಂದ ಮುಷ್ಕರ ಹೂಡುವ ಬೆದರಿಕೆ ಇರುವಾಗ, ಅದೇ ಕಾಲದಲ್ಲಿ ಕೇಂದ್ರ ಸರಕಾರಿ ನೌಕರರೂ ಮುಷ್ಕರ ಹೂಡುವ ಬಗ್ಗೆ ಯೋಜಿಸುತ್ತಿರುವರು

★

ವಿದ್ಯಾರ್ಥಿಗಳ ಪ್ರಾತಿನಿಧ್ಯ

ಬೆಂಗಳೂರು— ವಿಶ್ವವಿದ್ಯಾನಿಲಯದ ಸೆನೇಟು ಮತ್ತಿತರ ಸಮಿತಿಗಳಲ್ಲಿ ವಿದ್ಯಾರ್ಥಿಗಳ ಪ್ರತಿನಿಧಿಗಳಿರುವುದು ಅವಶ್ಯವೆಂದು, ಸ್ಟೂಡೆಂಟ್ಸ್ ಕೌನ್ಸಿಲ್ ಉದ್ಘಾಟಿಸುತ್ತಾ ಗೌರ್ನರ್ ಶ್ರೀ ಸುಖಾಡಿಯಾರವರು ಹೇಳಿದರು.

ಮೈಸೂರು ನಗರಲ್ಲಿ ನೀರಿನ ಕಷ್ಟ ಹೇಳತೀರದಷ್ಟಾಗಿದೆ ಮುನಿಸಿಪಾಲಿಟಿ ಮತ್ತು ಸರಕಾರ ಕೂಡಲೇ ಇದನ್ನು ಪರಿಹರಿಸಬೇಕಾಗಿದೆ

ವರ್ತಮಾನ ತೆರಿಗೆ ವಿನಾಯಿತಿ

ಯಳಂದೂರು ತಾಲ್ಲೂಕು ಬಿಳಿಗಿರಿರಂಗಸ್ವಾಮಿ ಬೆಟ್ಟದಲ್ಲಿರುವ ದೇವಾಲಯಕ್ಕೆ ಸಾರ್ವಜನಿಕರು ಕೊಡುವ ಎಲ್ಲಾ ಧನ ಸಹಾಯ, ಕಾಣಿಕೆಗಳಿಗೆ ವರ್ತಮಾನ ತೆರಿಗೆ ವಿನಾಯಿತಿ ಮಾಡಲಾಗಿದೆ.

★

ಬೀಡಿ ಕಾರ್ಮಿಕರ ಸಮ್ಮೇಳನ

ಮಂಗಳೂರು— ಬೀಡಿ ಕಾರ್ಮಿಕರ ಸಮ್ಮೇಳನವು ತಾ || 28, 29 ರಲ್ಲಿ ಕೇರಳ ಕೈಗಾರಿಕಾ ಮಂತ್ರಿ ಶ್ರೀ ಥಾಮಸ್ ರವರ ಅಧ್ಯಕ್ಷತೆಯಲ್ಲಿ ನಡೆಯಲಿದೆ; ಕರ್ನಾಟಕ ರಾಜ್ಯದ ಸಾಮಾಜಿಕ ಮಂತ್ರಿ, ಮತ್ತು ಈಗ ರಾಜ್ಯದ ಶಾಸನೋದ್ಯಮ ಕಾರ್ಪೊರೇಷನ್ ಅಧ್ಯಕ್ಷರು ಶ್ರೀ ಅಜೀಜ್ ಸೇಟ್ ರವರು ಉದ್ಘಾಟಿಸುವರು

ನಗರದಲ್ಲಿನ ನೀರಿನ ಕ್ಷಾಮ

ಮೈಸೂರು— ನಗರದಲ್ಲಿಯ ನೀರಿನ ತಾಪತ್ರಯ ಕುರಿತು ಸಂಬಂಧಪಟ್ಟ ಅಧಿಕಾರಿಗಳೊಡನೆ ಪೌರಾಡಳಿತ ಮಂತ್ರಿ ಶ್ರೀ ಡಿ. ಕೆ. ನಾಯ್ಕರರು ಪರ್ಯಾಲೋಚನೆ ನಡೆಸಿದರು – ಈಗ ಟ್ಯಾಂಕರ್‌ಗಳುಳ್ಳ 12 ಲಾರಿಗಳಲ್ಲಿ ನೀರನ್ನು ನಗರದ ವಿವಿಧ ಸ್ಥಳಗಳಿಗೆ ಸರಬರಾಜು ಮಾಡಲಾಗುತ್ತಿದೆ ಎಂದೂ, ಇದಕ್ಕಾಗಿ ಇನ್ನೂ 40 ಲಾರಿ ಪಡೆಯಲಾಗುವುದೆಂದೂ, ಪರಿಸ್ಥಿತಿ ಎದುರಿಸಲು ಸಕಲ ಪ್ರಯತ್ನ ಮಾಡಲಾಗುವುದೆಂದೂ ಹೇಳಿದರು – ನಗರ ಸಭೆಯನ್ನು ಕಾರ್ಪೊರೇಷನ್ನಾಗಿ ಮಾಡುವ ಮಸೂದೆಯನ್ನು ಮಂತ್ರಿಮಂಡಲ ಒಪ್ಪಿದೆಯೆಂದೂ ಅದನ್ನು ಕ್ಷಿಪ್ರದಲ್ಲೇ ಶಾಸನ ಸಭೆಯಲ್ಲಿ ತರಲಾಗುವುದೆಂದೂ ತಿಳಿಸಿದರು.

★

ರೂಪಾಯಿ ಮೌಲ್ಯ

ನವದೆಹಲಿ– ರೂಪಾಯಿನ ಮೌಲ್ಯವು ಫೆಬ್ರವರಿಯಲ್ಲಿ 37.5 ಪೈಸೆಗೆ ಇಳಿದಿತೆಂದೂ, ಅನೇಕ ಪದಾರ್ಥಗಳ ಬೆಲೆ ಏರಿಕೆಯೇ ಕಾರಣವೆಂದೂ ಲೋಕಸಭೆಯಲ್ಲಿ ತಿಳಿಸಲಾಯಿತು.

★

ರೂ. 220 ಕೋಟಿ ಹೆಚ್ಚು ಖರ್ಚು

ನವದೆಹಲಿ– ರೈಲ್ವೇಯವರ ಕೇಳಿಕೆಗೆ ಒಪ್ಪಿದರೆ ಸರಕಾರಕ್ಕೆ ರೂ 220 ಕೋಟಿ ಹೆಚ್ಚು ಖರ್ಚು ಬೀಳುವುದೆಂದು ಕೇಂದ್ರ ಸರಕಾರದ ಅಭಿವ್ಯಾಯವಾಗಿದೆ.

★

ಮಿಲಿಟರಿ ಅಕ್ರಮಣ ಭಯವಿಲ್ಲ

ನವದೆಹಲಿ—ಭಾರತದ ಮಿಲಿಟರಿ ದೇಶವನ್ನು ವಶಪಡಿಸಿಕೊಳ್ಳುವ ಅವಕಾಶವಿಲ್ಲವೆಂದು ರಕ್ಷಣಾಮಂತ್ರಿ ಶ್ರೀ ಜಗಜೀವನ್ ರಾಂ ಲೋಕಸಭೆಯಲ್ಲಿ ತಿಳಿಸಿದರು.

●

ಪ್ರಧಾನಿಯವರು ಇರಾನಿನಲ್ಲಿ

ತೆಹರಾನ್— ಇರಾನಿಗೆ ಭೇಟಿ ಕೊಡಲು ಭಾರತ ಪ್ರಧಾನಿ ಇಂದಿರಾರವರು ಭಾನುವಾರ ಇಲ್ಲಿಗೆ ಆಗಮಿಸಿದಾಗ ಅದ್ದೂರಿ ಸ್ವಾಗತ ದೊರೆಯಿತು – ಷಾರವರೊಡನೆ ಇಂದು ಮಾತುಕತೆ ನಡೆಸಲಿರುವರು – ಎಷ್ಟೆ ವಿಷಯವೂ ಮಾತಿನಲ್ಲಿ ಸೇರುವುದೆನ್ನಲಾಗಿದೆ – ಇಂದಿರಾರವರು, ಪ್ರಾದೇಶಿಕ ಸಹಕಾರಕ್ಕೆ ಒತ್ತಾಯಮಾಡಿ, ತನ್ಮೂಲಕ ಹಿಂದೂಸಾಗರದ ಗಡಿಪ್ರದೇಶದಲ್ಲಿ ಕಾರ್ಮಿಕ ಮಾರ್ಕೆಟ್‌ಗೆ ಅವಕಾಶ ವಿವರಿಸುವಂತಿದೆ.

★

ಆಹಾರ ವಲಯ

ಮಂಗಳೂರು— ಶಿವಮೊಗ್ಗಾ, ಕೊಡಗು, ಹಾಸನ, ಚಿಕ್ಕಮಗಳೂರು, ದ. ಕನ್ನಡ, ಗಳನ್ನೊಳಗೊಂಡ ಆಹಾರ ವಲಯ ಏರ್ಪಡಿಸುವುದು ಅವಶ್ಯಕವೆಂದು ಕಾಂಗ್ರೆಸ್ ಅಧ್ಯಕ್ಷರೂ, ಸಾರಿಗೆ ಮಂತ್ರಿಯವರೂ ಆದ ಶ್ರೀ ಕೆ. ಹೆಚ್. ರಂಗನಾಥ್‌ರವರು ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಧಾತಿ ಸಭೆಯಲ್ಲಿ ಹೇಳಿದರು.

○

ಕಣ್ಣು ಕಿತ್ತು ಹಾಕಿದರು

ಡಾಕಾ— ಬಾರಿಸಾಲ್ ಜಿಲ್ಲೆಯಲ್ಲಿ ಅಪರಾಧನೆಸಗಿದ ಇಬ್ಬರು ವೈದ್ಯಕೀಯ ವಿದ್ಯಾರ್ಥಿಗಳ ಕಣ್ಣನ್ನು ಕೊಡಿಸ್ ಮುಲ್ಲಾ ಕಿತ್ತು ಹಾಕಿದರು – ಹಾಗೇ ಒಂದು ಗ್ರಾಮದಲ್ಲಿ ಧರ್ಮಾಯಿತಿ ನಡೆಸಿದ 3 ಮಂದಿಯ ಕಣ್ಣನ್ನು ಗ್ರಾಮಸ್ಥರು ಕಿತ್ತು ಹಾಕಿದರು.

★

ಡಾ || ಮೋದಿ

ಪದ್ಮಭೂಷಣ ಡಾ|| ಎಂ ಸಿ. ಮೋದಿ (ಭಾರತಾಧ್ಯಕ್ಷರ ಗೌ || ನೇತ್ರವೈದ್ಯರು) ಉ ಕ ಜಿಲ್ಲೆ ಅಂಕೋಲಾದಲ್ಲಿ 3-5-74 ರಂದು ನೇತ್ರ ಚಿಕಿತ್ಸಾ ಶಿಬಿರ ನಡೆಸುವರು

2

ವಿಚಿತ್ರ ವಾರ್ತೆ - ಹುಡುಗ ಗರ್ಭಿಣಿಯಾಗಿದ್ದಾನೆ !

ಡಾಕಾ— ರಾಜಶಾಹಿ ವಿಶ್ವವಿದ್ಯಾಲಯದ 20 ವರ್ಷದ ಹುಡುಗ ಲಕ್ಷ್ಮಣ್ ಕ್ರಮೇಣ ಲೈಂಗಿಕ ಬದಲಾವಣೆಗಳಾಗಿ ಈಗ 4 ತಿಂಗಳ ಗರ್ಭಿಣಿಯಾಗಿದ್ದಾನೆ ಎಂದು ಸ್ಥಳೀಯ ಪತ್ರಿಕೆ ಪ್ರಕಟಿಸಿದೆ – ಲಕ್ಷ್ಮಣ್‌ಗೆ ಹುಟ್ಟಿದಾಗ ಪುರುಷ ಮತ್ತು ಸ್ತ್ರೀ ಅಂಗಗಳಿದ್ದು ಕ್ರಮೇಣ ಪುರುಷ ಲಿಂಗದ ಚಟುವಟಿಕೆ ಹೆಚ್ಚಿ, ನಂತರ ಅದು ತಗ್ಗಿ ಸ್ತ್ರೀಲಿಂಗದ ಚಟುವಟಿಕೆ ಹೆಚ್ಚಿ ರಜಸ್ವಲೆಯಾದನಂತರ ಪ್ರತಿ ತಿಂಗಳೂ ಮುಟ್ಟಾಗುವುದು ಪ್ರಾರಂಭವಾಯಿತು – ಹುಡುಗನು ಚಿಂತೆಯಿಂದ ಕೂಡಿದ್ದರೂ ಹುಡುಗನ ಹಾಗೆಯೇ ಓದುತ್ತಿದ್ದನು – ಈಗ ಹುಡುಗ 4 ತಿಂಗಳ ಗರ್ಭಿಣಿಯಾಗಿರುವುದು ಕಂಡುಬಂದಿದೆ – ಹೇಗೆ ಗರ್ಭಿಯಾದನೆಂಬುದನ್ನು ತಿಳಿಸಲು ನಾಚಿಕೆಗೊಂಡಿದ್ದಾನೆ – ಇಂತಹ ಘಟನೆ ವೈದ್ಯಕೀಯ ಇತಿಹಾಸದಲ್ಲೇ ದಾಖಲಿಲ್ಲವೆನ್ನಲಾಗಿದೆ !

★

ಪ್ರೊಫೆಸರಿನ ದುರ್ನಡತೆಗಾಗಿ

ಅಲಹಾಬಾದು— ವಿಶ್ವವಿದ್ಯಾನಿಲಯದ ಒಬ್ಬ ವಿದ್ಯಾರ್ಥಿ ವಿಷಯದಲ್ಲಿ ದುರ್ನಡತೆ ವ್ಯಕ್ತಪಡಿಸಿದ್ದಾಕ್ಕಾಗಿ ಕುಪಿತ ವಿದ್ಯಾರ್ಥಿಗಳು ಕೆಮಿಸ್ಟ್ರಿ ಇಲಾಖಾ ಕಛೇರಿಗೆ ಬೆಂಕಿ ಹತ್ತಿಸಿ, ವೈಸ್‌ಛಾನ್ಸಲರರ ಆಫೀಸಿಗೆ ಹೋಗಿ ಆ ಪ್ರೊಫೆಸರರ ಮೇಲೆ ಕ್ರಮ ಕೈಗೊಳ್ಳಲು ಕೇಳಿಕೆ ಹಾಕಿದರು.

★

ಶಿಕ್ಷಣ ಶಿಬಿರ

ಮೈಸೂರು— ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ ವತಿಯಿಂದ ಗ್ರಾಮಾಂತರ ಯುವಕ ಮಂಡಲಿಗಳ ಶಿಕ್ಷಣ ಶಿಬಿರವನ್ನು ನಂಜನಗೂಡು ವಿದ್ಯಾಪೀಠದಲ್ಲಿ ತಾ ॥ 29-4-74 ರಿಂದ ಒಂದು ವಾರ ಏರ್ಪಡಿಸಿಲಾಗಿದೆ.

ವುಡ್‌ಲಾಂಡ್ 25 4 74 ರಿಂದ

ಅವೋಘ ಆರಂಭ

ಉ ಪಾ ಸ ನೆ

ಕನ್ನಡ ಕಲರ್ ಮಹೋನ್ನತ ಚಿತ್ರ ದಿನ 3 ಪ್ರದರ್ಶನಗಳು

ಪಾತ್ರ : ಆರತಿ ಡಾ॥ ಮಣ್ಣೂರ್ ಶಿವರಾಂ ಕೆ. ಎಸ್. ಅಶ್ವತ್ಥ್, ಲೀಲಾವತಿ ಮುಂತಾದವರು ದಿಗ್ದರ್ಶನ : ಎಸ್. ಆರ್. ಪುಟ್ಟಣ್ಣ ಕಣಗಾಲ್

25-4-74 ರಿಂದ ಬಾಲ್ಕನಿ ತರಗತಿಗಳಿಗೆ ಮಾತ್ರ ಮುಂಚಿತವಾಗಿ ಟಿಕೆಟ್ ಕೊಡಲಾಗುವುದು ದಿನ ಬೆಳಿಗ್ಗೆ 10-30 ರಿಂದ 11-30 ರ ವರೆಗೆ

ಅ ಪೆ ರಾ 26 4 74 ರಿಂದ

ನಾಗ್ ಮೋರೆ ಸಾಥಿ

ರೋಮಾಂಚಕಾರಿ ಹಿಂದಿ ವರ್ಣ ಚಿತ್ರ

ದಿನ 3 ಪ್ರದರ್ಶನಗಳು

SHAKTI
SUDHA

A Superb Tonic

Contribute Liberally
to the National Defence Fund

Quality Printing Neat Binding

Lakshminarasimha Press

Sivarampet, Mysore 1

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

Protect the Cow

Edited Printed and Published by Dharmapracharanirata M S Krishna Rao (Proprietor) at the Satvavadi Press, Chamarajapuram Mysore